# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 30
ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಪ್ರಾಣೇಶ.ಎಂ.ಕೆ.
ಉತ್ತರಿಸಬೇಕಾದ ದಿನಾಂಕ : 13.12.2018.
ಉತ್ತರಿಸುವವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಚಿಕ್ಕಮಗಳೂರು ನಗರದ ಕೆಂಪನ ಹಳ್ಳಿಯಲ್ಲಿರುವ "ಆಶಾಕಿರಣ" ಅಂಧ ಮಕ್ಕಳ ವಸತಿ ಪಾಠಶಾಲೆಯಲ್ಲಿ ಮಂಜೂರಾಗಿದ್ದ ಹುದ್ದೆಗಳ ಪೈಕಿ 4 ಶಿಕ್ಷಕರು ಮತ್ತು 1 ಶಿಕ್ಷಕೇತರ ಹುದ್ದೆಗಳು ಎರಡು ವರ್ಷಗಳಿಂದ ಖಾಲಿಯಾಗಿದ್ದು, ಇವುಗಳ ಭರ್ತಿಗೆ ಇಲಾಖೆಯಿಂದ ಅನುಮತಿ ಕೋರಲಾಗಿದೆಯೇ: ಹಾಗಾದಲ್ಲಿ ಅನುಮತಿ ನೀಡದಿರಲು ಕಾರಣವೇನು; (ವಿವರ ನೀಡುವುದು) | ಅ. ಸರ್ಕಾರವು ಶಾಲೆಯನ್ನು ವೇತನಾನುದಾನಕ್ಕೆ ಒಳಪಡಿಸಿದಾಗ 128 ಅಂಧ ಮಕ್ಕಳಿದ್ದು, ಮುಖ್ಯೋಪಾಧ್ಯಾಯರು-1, ಪದವೀಧರ ಸಹಾಯಕರು-2, ಸಹಾಯಕ ಶಿಕ್ಷಕರು-9, ಸಂಗೀತ ಶಿಕ್ಷಕರು-1 ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿದೆ.<br>ಆ. ಪ್ರಸ್ತುತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ 32 ಹಾಗೂ ಪ್ರೌಢಶಾಲೆಯಲ್ಲಿ 44 ಅಂಧ ವಿದ್ಯಾರ್ಥಿಗಳಿದ್ದು, 5 ಸಹಾಯಕ ಶಿಕ್ಷಕರು, 1 ಹಿಂದಿ ಶಿಕ್ಷಕರು, 2 ಪದವೀಧರ ಸಹಾಯಕರು ಹಾಗೂ ಒಂದು ಮುಖ್ಯೋಪಾಧ್ಯಯರು ಇರುತ್ತಾರೆ.<br>ಇ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿನ 32 ಮಕ್ಕಳಿಗೆ 3 ಸಹಾಯಕ ಶಿಕ್ಷಕರ ಅವಶ್ಯಕತೆ ಇದ್ದು, ಹೆಚ್ಚುವರಿಯಾಗಿ ಇಬ್ಬರು ಸಹಾಯಕ ಶಿಕ್ಷಕರು ಇರುವುದು ಕಂಡು ಬಂದಿರುತ್ತದೆ.<br>ಹಾಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ಸಂಖ್ಯೆಯನ್ನು ಪರಿಶೀಲಿಸಿದಾಗ ಇನ್ನು ಹೆಚ್ಚುವರಿಯಾಗಿ ಇಬ್ಬರು ಶಿಕ್ಷಕರು ಇರುವುದು ಕಂಡು ಬಂದಿರುತ್ತದೆ. ಆದಕಾರಣ ಅನುಮತಿ ನೀಡಿರುವುದಿಲ್ಲ. |
| ಆ | ಶಿಕ್ಷಕರ ಕೊರತೆಯಿಂದ ಅಂಧ ಮಕ್ಕಳಿಗೆ ಪಾಠ ಮಾಡಲು ತೊಂದರೆಯಾಗುವುದಿಲ್ಲವೇ: ಖಾಲಿ ಇರುವ ಹುದ್ದೆಗಳಿಗೆ ಅನುಮತಿ ನೀಡದಿರಲು ಪ್ರಮುಖ ಕಾರಣವೇನು? | ಪ್ರಸ್ತುತ ಶಾಲೆಯಲ್ಲಿ ಮಕ್ಕಳ ಅನುಪಾತಕ್ಕೆ ತಕ್ಕಂತೆ ಶಿಕ್ಷಕರ ವೃಂದ ಇರುವುದರಿಂದ ಅಂಧ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆ ಇರುವುದಿಲ್ಲ. |
| ಇ | ಚಿಕ್ಕಮಗಳೂರು ನಗರ ಕೆಂಪನಹಳ್ಳಿಯಲ್ಲಿ ಇರುವ "ಆಶಾಕಿರಣ" ಅಂಧ ಮಕ್ಕಳ ವಸತಿ ಪಾಠಶಾಲೆಯಲ್ಲಿ ವಾಚ್‌ಮೆನ್ ಹಾಗೂ ಸ್ವೀಪರ್ ಆಗಿ ಕಳೆದ 16 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಖಾಯಂ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ: ಹಾಗಿದ್ದಲ್ಲಿ, ಕೈಗೊಂಡಿರುವ ಕ್ರಮಗಳಾವುವು? | ಸರ್ಕಾರದ ಆದೇಶ ಸಂಖ್ಯೆ: ಮಮಇ 127 ಪಿಹೆಚ್‌ಪಿ 2007, ದಿನಾಂಕ:03.11.2007ರಲ್ಲಿ ಸದರಿ ಸಂಸ್ಥೆಯ ಮೂಲಕ ಚಿಕ್ಕಮಗಳೂರಿನಲ್ಲಿ ನಡೆಸಲಾಗುತ್ತಿರುವ ಆಶಾಕಿರಣ ಅಂಧ ಮಕ್ಕಳ ವಸತಿಯುತ ಪಾಠಶಾಲೆಯನ್ನು 22 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಲ್ಲಿ ವಾಚ್‌ಮೆನ್ ಮತ್ತು ಸ್ವೀಪರ್ ಹುದ್ದೆಗಳಿಗೆ ಮಂಜೂರಾತಿ ನೀಡಿರುವುದಿಲ್ಲ. ಆದ್ದರಿಂದ ಸದರಿ ಶಾಲೆಯಲ್ಲಿ ವಾಚ್‌ಮೆನ್ ಹಾಗೂ ಸ್ವೀಪರ್ ಆಗಿ ಕಳೆದ 16 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವುದೆಂದು ತಿಳಿಸಿರುವ ಸಿಬ್ಬಂದಿಗಳಿಗೆ ಖಾಯಂ ಮಾಡುವ ಉದ್ದೇಶ ಸರ್ಕಾರದ ಮುಂದೆ ಇರುವುದಿಲ್ಲ ಹಾಗೂ ಈ ಬಗ್ಗೆ ಮುಂದಿನ ಯಾವುದೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನಿಯಮಾನುಸಾರ ಅವಕಾಶವಿರುವುದಿಲ್ಲ. |

ಸಂಖ್ಯೆ:ಮಮಇ 241 ಪಿಹೆಚ್‌ಪಿ 2018

Halappa

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು